## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಮೂಡಿಗೆರೆ

## ಸಿ.ಸಿ. ಸಂಖ್ಯೆ:**3042/2025**

| | | |
|---|---|---|
| ಪಿರ್ಯಾದಿ | : | ರಾಜ್ಯ, ಪರವಾಗಿ ಮೂಡಿಗೆರೆ ಅಬಕಾರಿ ವಲಯ,<br>ಮೂಡಿಗೆರೆ ತಾಲ್ಲೂಕು. |

ವಿರುದ್ಧ

| | | |
|---|---|---|
| ಆರೋಪಿ | : | ಆರ್.ಎನ್.ದೀಕ್ಷಿತ್, ವಯಸ್ಸು ಸುಮಾರು 34 ವರ್ಷ,<br>ಬಿನ್ ನಾಗೇಶಗೌಡ, ವಾಸಃ ರಾಮನಕೂಡಿಗೆ,<br>ಹೆಮ್ಮಕ್ಕಿ ಗ್ರಾಮ, ಕಳಸ ಹೋಬಳಿ ಮತ್ತು ತಾಲ್ಲೂಕು. |

ದೋಷಾರೋಪಣೆ

ಶ್ರೀಮತಿ ಸುರಕ್ಷ ಕೆ.ಕೆ., C/c ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ, ಆದ ನಾನು, ಆರೋಪಿತರಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೇ:-

ದಿನಾಂಕ 05.09.2024 ರಂದು ಮಧ್ಯಾಹ್ನ 3.00 ರ ಸಮಯದಲ್ಲಿ ಮೂಡಿಗೆರೆ ಅಬಕಾರಿ ವ್ಯಾಪ್ತಿಯ ಹೆಮ್ಮಕ್ಕಿ ಗ್ರಾಮದ ರಾಮನಕೂಡಿಗೆ ವಾಸಿ ಆರೋಪಿಯಾದ ನೀವು ನಿಮಗೆ ಸೇರಿದ ವಾಸದ ಮನೆಯ ಅಂಗಳದಲ್ಲಿ ಒಟ್ಟು 3 ಲೀಟರ್ ನಷ್ಟು ಕಳ್ಳಭಟ್ಟಿ ತಯಾರಿಸಲು ಬಳಸುವ ಪರಿಕರಗಳಾದ ***80*** ಲೀಟರ್ ಸಾಮರ್ಥ್ಯದ ಬೆಲ್ಲದ ಕೊಳೆ ವಾಸನೆಯುಳ್ಳ ಒಂದು ಅಲ್ಯೂಮಿನಿಯಂ ಹಂಡೆ, ಒಂದು ಅಲ್ಯೂಮಿನಿಯಂ ಪಾತ್ರೆ ಹಾಗೂ ಒಂದು ಮರದ ಮಣೆ, ಅದಕ್ಕೆ ಹೊಂದಿಕೊಂಡಿರುವ ರಬ್ಬರ್ ಪೈಪ್ ಅನ್ನು ನಿಮ್ಮ ವಶದಲ್ಲಿಟ್ಟುಕೊಂಡಿದ್ದಾಗ ಅಬಕಾರಿ ಪೊಲೀಸರು ನಡೆಸಿದ ದಾಳಿ ಕಾಲಕ್ಕೆ ಸಿಕ್ಕಿರುತ್ತೀರಿ. ಈ ರೀತ್ಯಾ ಆರೋಪಿಯಾದ ನೀವು ಕರ್ನಾಟಕ ಅಬಕಾರಿ ಕಾಯ್ದೆ ಕಲಂ **32(1)** ಮತ್ತು **40** ರಡಿಯಲ್ಲಿ ದಂಡನೀಯ ಅಪರಾಧವನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಎಸಗಿರುತ್ತೀರಿ ಎಂದು ದೋಷಾರೋಪಿಸಲಾಗಿದೆ***?***

ಸದರಿ ಮೇಲ್ಕಂಡ ಆರೋಪಗಳನ್ನು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಮಾಡಿದ್ದರಿಂದ, ಅವುಗಳು ಈ ನ್ಯಾಯಾಲಯದಿಂದ ವಿಚಾರಣೆಯಾಗತಕ್ಕದೆಂದು ಆದೇಶಿಸಲಾಗಿದೆ

ಪ್ರಃ 1. ಈಗ ಮೇಲೆ ಓದಿ ಹೇಳಿದ ದೋಷಾರೋಪಣೆಯನ್ನು ಕೇಳಿದ್ದೀರಾ***?*** ಅವುಗಳು ನಿಮಗೆ ಅರ್ಥವಾಯಿತೇ***?***

ಆರೋಪಿಯ ಉತ್ತರಃ

ಪ್ರಃ 2. ನೀವು ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ*?*

ಆರೋಪಿಯ ಉತ್ತರಃ

*(*ಆರೋಪಿಗೆ ದಿನಾಂಕ 20.02.2026 ರಂದು ದೋಷಾರೋಪಣೆಯನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ*,* ಅವರ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು*.* ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ*)*

**Sd/-**

ಮೂಡಿಗೆರೆ
ದಿನಾಂಕಃ 20.02.2026

C/c ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಮೂಡಿಗೆರೆ.